M.V.C. No.453/2020
R.W.-1

# 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ, (ಗಂಗಾವತಿ ಪೀಠ)

## M.V.C. No.453/2020

ಇಂದು ದಿನಾಂಕ- **14.08.2026** ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯದ ಸಾಕ್ಷಿ ಕಟ್ಟೆಯಲ್ಲಿ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮುಖ್ಯ ವಿಚಾರಣೆ - 3 ನೇ ಎದುರುದಾರರು ಪರ ವಕೀಲರಿಂದ -**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ವಿಚಾರಗಳೆಲ್ಲ ಸತ್ಯವಾಗಿವೆ, ಅದರಲ್ಲಿರುವ ವಿಚಾರಗಳನ್ನೆಲ್ಲ ನಾನೇ ಹೇಳಿ ಬರೆಯಿಸಿರುತ್ತೇನೆ ಹಾಗೂ ಅದರಲ್ಲಿರುವ ಸಹಿಗಳು ನನ್ನದೇ ಆಗಿರುತ್ತವೆ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಪ್ರಾರ್ಥನೆ.

| | |
|---|---|
| ನಿ.ಆರ್.-1 | ವಿಮಾ ಪಾಲಿಸಿಯ ದೃಢೀಕೃತ ನಕಲು |
| ನಿ.ಆರ್.-2 | ಚಾಲನಾ ಪರವಾನಗಿಯ ದೃಢೀಕೃತ ನಕಲು |
| ನಿ.ಆರ್.-3 | ವಾಹನದ ನೋಂದಣಿ ಪತ್ರದ ದೃಢೀಕೃತ ನಕಲು |
| ನಿ.ಆರ್.-4 | ಹಿಂಬರಹದ ದೃಢೀಕೃತ ನಕಲು |
| ನಿ.ಆರ್.-5 | Authorization letter ನ ದೃಢೀಕೃತ ನಕಲು |
| ನಿ.ಆರ್.-6 | ಸಾಮಾನ್ಯ ಮೊಕ್ತಿಯಾರ ನಾಮಪತ್ರದ ದೃಢೀಕೃತ ನಕಲು |
| ನಿ.ಆರ್.-7 | ವಿಮಾ ಪಾಲಿಸಿಯ ದೃಢೀಕೃತ ನಕಲು |
| ನಿ.ಆರ್.-8 | ವಾಹನದ ನೋಂದಣಿ ಪತ್ರದ ದೃಢೀಕೃತ ನಕಲು |
| ನಿ.ಆರ್.-9 | ಚಾಲನಾ ಪರವಾನಗಿಯ ದೃಢೀಕೃತ ನಕಲು |

ಎಂದು ಗುರುತಿಸಿದ್ದೇನೆ.

ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

**<u>ಪಾಟೀಸವಾಲು - ಅರ್ಜಿದಾರರ ಪರ ವಕೀಲರಿಂದ -</u>**

2. M.V.C.No.326/2022 ರಲ್ಲಿ 3 ನೇ ಎದುರುದಾರರು ತನ್ನ ಬಾಧ್ಯತೆಯನ್ನು ಒಪ್ಪಿಕೊಂಡು ಪರಿಹಾರದ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರಿಗೆ ಸೂಕ್ತ ಚಾಲನಾ ಪರವಾನಗಿ ಇತ್ತು ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಚಾಲನಾ ಪರವಾನಗಿ 1 ನೇ ಎದುರುದಾರರಿಗೆ ಆಟೋ ಚಾಲನೆ ಮಾಡಲು ಇರುವ ಸೂಕ್ತ ಚಾಲನಾ ಪರವಾನಗಿ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ 2 ನೇ ಎದುರುದಾರರ ವಾಹನಕ್ಕೆ 3 ನೇ ಎದುರುದಾರರಿಂದ ವಿಮೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸದರಿ ವಿಮೆ ಪ್ಯಾಕೇಜ್ ವಿಮಾ ಪಾಲಿಸಿ ಎಂದರೆ ಸರಿ. ಸದರಿ ವಿಮಾ ಪಾಲಿಸಿ ಆಟೋ ಚಾಲಕ ಸೇರಿ 4 ಜನರಿಗೆ ಬಾಧ್ಯತೆ ಇತ್ತು ಎಂದರೆ ಸರಿ. 3 ನೇ ಎದುರುದಾರರು ನೀಡಿರುವ ವಿಮಾ ಪಾಲಿಸಿ ವಾಣಿಜ್ಯ ವಾಹನಕ್ಕೆ ಸಂಬಂಧಪಟ್ಟ ವಿಮಾ ಪಾಲಿಸಿ ಎಂದರೆ ಸರಿ. ಅರ್ಜಿದಾರರು ಆಟೋದಲ್ಲಿ ಅನಧಿಕೃತವಾಗಿ ಪ್ರಯಾಣ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಟೋದಲ್ಲಿ ನಿಗದಿತ ಪ್ರಯಾಣಿಕರಿಗೂ ಹೆಚ್ಚು ಪ್ರಯಾಣಿಕರು ಪ್ರಯಾಣಿಸುತ್ತಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ, ಪೊಲೀಸ್ ದಾಖಲಾತಿಗಳ ಆಧಾರದಲ್ಲಿ ಅದನ್ನು ಹೇಳುತ್ತಿದ್ದೇನೆ. ಪೊಲೀಸ್ ದಾಖಲೆಗಳ ಪ್ರಕಾರ

1 ನೇ ಎದುರುದಾರರ ತಪ್ಪಿನಿಂದ ಅಪಘಾತವಾಗಿದೆ ಎಂದರೆ ಸರಿ. ನನಗೆ ಅರ್ಜಿದಾರರ ವೃತ್ತಿ ಹಾಗೂ ಆದಾಯದ ಬಗ್ಗೆ ವೈಯಕ್ತಿಕವಾಗಿ ಗೊತ್ತಿಲ್ಲ ಎಂದರೆ ಸರಿ. ಅರ್ಜಿದಾರರಿಗೆ ಅಪಘಾತದಿಂದಾದ ಗಾಯಗಳ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ, ಹೌದು ದಾಖಲೆಗಳ ಆಧಾರದ ಮೇಲೆ ಗೊತ್ತು. 1 ನೇ ಎದುರುದಾರರ ತಪ್ಪಿನಿಂದ ಅಪಘಾತವಾಗಿರುವ ಕಾರಣ 3 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರು ಎಂದರೆ ಸಾಕ್ಷಿ ನುಡಿಯುತ್ತಾರೆ, ಪರವಾನಗಿ ಚಾಲ್ತಿಯಲ್ಲಿರಲಿಲ್ಲ. ಅಪಘಾತವು ಸಿಂಧನೂರು ಸಂಚಾರಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಆಗಿದೆ ಎಂದರೆ ಸರಿ. ನಾನು ಆಟೋದ ಪರವಾನಗಿಯ ದಾಖಲೆಯನ್ನು ನೋಡಿಲ್ಲ. ಆಟೋಗೆ ಪರವಾನಗಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರರಿಗೆ 3 ನೇ ಎದುರುದಾರರು ಪರಿಹಾರ ನೀಡಲು ಬಾಧ್ಯರು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ, ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಗಿದೆ.)

ಓ. ಹೇ. ಕೇ. ಸರಿ ಇದೆ.

(**ವೇದಮೂರ್ತಿ ಬಿ.ಎಸ್.**)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಪ್ಪಳ (ಗಂಗಾವತಿ ಪೀಠ).